# ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹಿರೇಕೆರೂರ.

**ಉಪಸ್ಥಿತರುಃ- ಶ್ರೀ ವೈ. ಕೆ. ಬೇನಾಳ,** ಬಿ.ಎ., ಎಲ್.ಎಲ್.ಬಿ., (ಆನರ್ಸ),
**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಹಿರೇಕೆರೂರ.**

**ದಿನಾಂಕ 06 ನೇ ಜನವರಿ 2024**

## ಸಿ.ಸಿ.ಸಂಖ್ಯೆಃ 82/2020

**ಅರ್ಜಿದಾರ/ಆರೋಪಿ:-**

ರವಿ ತಂದೆ ಉಳಿವೆಪ್ಪ ಬಸನಗೌಡ್ರ,
ವ: 34 ವರ್ಷ, ಉ: ಗುತ್ತಿಗೆದಾರ,
ಸಾ:ಸುತ್ತಕೋಟಿ, ಹಾ/ವ: ಹಿರೇಕೆರೂರ, ತಾ: ಹಿರೇಕೆರೂರು,
ಜಿ: ಹಾವೇರಿ.

**(ಅರ್ಜಿದಾರ/ಆರೋಪಿ ಪರ ವಕೀಲರುಃ ಶ್ರೀ ಆರ್.ವಿ. ರಂಗನವರ)**

**ವಿರುದ್ಧ**

**ಪಿರ್ಯಾದಿದಾರ/ಎದುರುದಾರ:-**

ಹೇಮಂತ ತಂದೆ ವಸಂತರಾವ್ ಮೋಟೆಬೆನ್ನೂರ,
ವ: 32 ವರ್ಷ, ಉ: ವ್ಯಾಪಾರ ಮತ್ತು ಗುತ್ತಿಗೆದಾರ,
ಸಾ: ತೋಟಗಂಟಿ ರಸ್ತೆ, ಎಂ.ಎಸ್.ಐ.ಎಲ್ ಹತ್ತಿರ,
ಸಾಕಿನ, ತಾ: ರಟ್ಟಿಹಳ್ಳಿ, ಜಿ:ಹಾವೇರಿ.

**(ಪಿರ್ಯಾದಿದಾರ/ ಎದುರುದಾರನ ಪರ ವಕೀಲರುಃ ಶ್ರೀ ಆರ್.ಸಿ. ಶಿಡೇನೂರ)**

-:oOo:-

## ದಂಡ ಪ್ರಕ್ರಿಯಾ ಸಂಹಿತೆಯ ಕಲಂ 311ರ ಅಡಿಯಲ್ಲಿನ ಅರ್ಜಿಯ ಮೇಲೆ ಆದೇಶ

ಆರೋಪಿಯು ಈ ಮಧ್ಯಂತರ ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 311ರ ಅಡಿಯಲ್ಲಿ ಸಲ್ಲಿಸಿ, ದಂಡ ಪ್ರಕ್ರಿಯೇ ಸಂಹಿತೆಯ ಕಲಂ 91ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶದಂತೆ, ಹಾಜರುಪಡಿಸಿದ ದಾಖಲೆಗಳನ್ನು ನಿಶಾನೆಯೆಂದು ಗುರುತಿಸಲು ಹಿರೇಕೆರೂರು ಶಾಖೆಯ ಯೂನಿಯನ್ ಬ್ಯಾಂಕ್ ವ್ಯವಸ್ಥಾಪಕರಿಗೆ ಸಾಕ್ಷಿ ನುಡಿಯಲು ಸಮನ್ಸನ್ನು ಕಳುಹಿಸಬೇಕೆಂದು ಕೋರಿರುತ್ತಾನೆ.

2. ಪಿರ್ಯಾದಿದಾರನು ಈ ಅರ್ಜಿಗೆ ತಕರಾರನ್ನು ಸಲ್ಲಿಸಿ, ಆರೋಪಿಯು ಸಲ್ಲಿಸಿದ ಅರ್ಜಿಯು ಊರ್ಜಿತವಾಗಿರುವುದಿಲ್ಲ. ಆರೋಪಿಯು ಈ ಅರ್ಜಿಯಲ್ಲಿ ಕೇಳಿದ ಮಾಗಣಿಯ ಪ್ರಕಾರ ಯೂನಿಯನ್ ಬ್ಯಾಂಕಿನ ವ್ಯವಸ್ಥಾಪಕರು ನ್ಯಾಯಾಲಯಕ್ಕೆ ಬಂದು ದಾಖಲೆಗಳನ್ನು ಗುರುತಿಸಲು ಬರಲಾರದು, ಅದಕ್ಕೆ ಕಾಯ್ದೆಯಡಿಯಲ್ಲಿ ಆಸ್ಪದ ಇರುವುದಿಲ್ಲ. ಸದರಿ ದಾಖಲೆಗಳನ್ನು ಗುರುತಿಸುವ ಅಧಿಕಾರ ಅವರಿಗೆ ಇರುವುದಿಲ್ಲ. ಆದ್ದರಿಂದ, ಈ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾನೆ.

3. ಆರೋಪಿ ಮತ್ತು ಪಿರ್ಯಾದಿದಾರನ ಪರ ವಕೀಲರ ವಾದವನ್ನು ಆಲಿಸಲಾಯಿತು.

4. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಆರೋಪಿಯು ಈ ಅರ್ಜಿಯಲ್ಲಿ ಕೋರಿರುವಂತೆ, ದಾಖಲೆಗಳನ್ನು ನಿಶಾನೆಯೆಂದು ಗುರುತಿಸುವ ಸಲುವಾಗಿ ಹಿರೇಕೆರೂರು ಶಾಖೆಯ ಯೂನಿಯನ್ ಬ್ಯಾಂಕಿನ ವ್ಯವಸ್ಥಾಪಕರಿಗೆ ಸಾಕ್ಷಿಯ ಸಮನ್ಸನ್ನು ನೀಡಲು ಇರುವ ಕಾರಣಗಳನ್ನು ತೋರಿಸಿದ್ದಾನೆಯೇ?

ಅಂಶ- 2- ಯಾವ ಆದೇಶ?

5. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ:-

ಅಂಶ-1 - ಸಕಾರಾತ್ಮಕವಾಗಿ ಮತ್ತು

ಅಂಶ-2- ಅಂತಿಮ ಆದೇಶದಂತೆ:

## ಕಾರಣಗಳು

6. **ಅಂಶ 1**:– ಪಿರ್ಯಾದಿದಾರನು ತನ್ನ ಪಿರ್ಯಾದಿಯಲ್ಲಿ, ಆರೋಪಿಯು ಹಾಗೂ ಪಿರ್ಯಾದಿದಾರನು ಸಹಪಾಠಿಗಳಿದ್ದು, ಸುಮಾರು ವರ್ಷಗಳಿಂದ ಸ್ನೇಹಿತರು ಇರುವ ಕಾರಣ, ಅನ್ಯೋನ್ಯವಾಗಿದ್ದು, ಆರೋಪಿಯು ತನ್ನ ಗೃಹಕೃತ್ಯದ ಅಡಚಣೆ ಹಾಗೂ ವ್ಯಾಪಾರದ ಅಭಿವೃದ್ಧಿಗಾಗಿ ಆಗಾಗ ಕೈಗಡ ಹಣ ಪಡೆದುಕೊಳ್ಳುವುದು, ಕೊಡುವುದು ಮಾಡುತ್ತಾ ಬಂದಿದ್ದು, ದಿನಾಂಕ 18-04-2019 ರಂದು 6,00,000/- ರೂ.ಗಳನ್ನು ಪಿರ್ಯಾದಿದಾರನಿಂದ ಕೈಗಡ ಸಾಲವನ್ನು ಪಡೆದುಕೊಂಡಿದ್ದು, ಮತ್ತು ದಿ: 12-05-2019 ರಂದು ಪಿರ್ಯಾದಿದಾರನ ಮನೆಗೆ ಬಂದು ಒಪ್ಪಿ 7,00,000/- ರೂ.ಗಳನ್ನು ಕೈಗಡ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಹಣವನ್ನು ಮರುಪಾವತಿ ಮಾಡಲು ಪಿರ್ಯಾದಿದಾರನು ಕೇಳಿಕೊಂಡಾಗ, ದಿ: 22-09-2019 ಎಂದು ನಮೂದಿಸಿದ ಚೆಕ್ ನಂ. 02096473 ನೇದ್ದನ್ನು 6,00,000/- ರೂ.ಗಳಿಗೆ ಹಾಗೂ ದಿ: 30-09-2019 ಎಂದು ನಮೂದಿಸಿದ ಚೆಕ್ ನಂ. 02096470 ನೇದ್ದನ್ನು 7,00,000/- ರೂ.ಗಳಿಗೆ ಕೊಟ್ಟಿದ್ದು, ಪಿರ್ಯಾದಿದಾರನು ನಗದೀಕರಣಕ್ಕೆ ಸದರಿ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸಿದಾಗ, ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎನ್ನುವ ಹಿಂಬರಹದೊಂದಿಗೆ ಮರಳಿ ಬಂದಿರುವುದರಿಂದ, ಆರೋಪಿ ಲಿಖಿತಗಳ ವರ್ಗಾವಣೆಯ ಅಧಿನಿಯಮದ ಕಲಂ 138 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾನೆಂದು ಆರೋಪಿಸಿ, ಖಾಸಗಿ ಪಿರ್ಯಾದಿಯನ್ನು

ಸಲ್ಲಿಸಿರುತ್ತಾನೆ. ಅಲ್ಲದೇ, ಈಗಾಗಲೇ ಪಿರ್ಯಾದಿದಾರನು ತಾನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ಪಿ.ಡಬ್ಲೂ-1ರವರ ಮುಂದುವರೆದ ಪಾಟೀ ಸವಾಲಿಗೆಂದು ಪ್ರಕ್ರಿಯೇ ಇದ್ದಾಗ, ಆರೋಪಿಯು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ದಾಖಲೆಗಳನ್ನು ನಿಶಾನೆಯೆಂದು ಗುರುತಿಸುವ ಸಲುವಾಗಿ ಹಿರೇಕೆರೂರ ಶಾಖೆಯ ಯೂನಿಯನ್ ಬ್ಯಾಂಕಿನ್ ವ್ಯವಸ್ಥಾಪಕರಿಗೆ ಸಾಕ್ಷಿ ಸಮನ್ಸ ನೀಡಬೇಕೆಂದು ಕೋರಿರುತ್ತಾನೆ.

7. ಆರೋಪಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಆರೋಪಿಯು ದಂಡ ಪ್ರಕ್ರಿಯೇ ಸಂಹಿತೆಯ ಕಲಂ 91ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶದಂತೆ, ದಿ: 28-02-2023 ರಂದು ಹಾಜರುಪಡಿಸಿದ ದಾಖಲೆಗಳನ್ನು ನಿಶಾನೆಯೆಂದು ಗುರುತಿಸಲು ಹಿರೇಕೆರೂರು ಶಾಖೆಯ ಯೂನಿಯನ್ ಬ್ಯಾಂಕ್ ವ್ಯವಸ್ಥಾಪಕರಿಗೆ ಸಾಕ್ಷಿ ನುಡಿಯಲು ಸಮನ್ಸನ್ನು ನೀಡುವುದು ಅವಶ್ಯವಾಗಿದ್ದು, ಸದರಿ ದಾಖಲೆಗಳು ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ಪ್ರಮುಖವಾದಂತಹ ದಾಖಲೆಗಳು ಇರುತ್ತವೆ. ಕಾರಣ, ಈ ಅರ್ಜಿಯನ್ನು ಪುರಸ್ಕರಿಸಿ, ಸಾಕ್ಷಿ ನುಡಿಯಲು ಹಿರೇಕೆರೂರು ಶಾಖೆಯ ಯೂನಿಯನ್ ಬ್ಯಾಂಕ್ ವ್ಯವಸ್ಥಾಪಕರಿಗೆ ಸಮನ್ಸ ನೀಡಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

8. ಪಿರ್ಯಾದಿದಾರನ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಆರೋಪಿಯು ಸಲ್ಲಿಸಿದ ಅರ್ಜಿಯು ಊರ್ಜಿತವಾಗಿರುವುದಿಲ್ಲ. ಆರೋಪಿಯು ಈ ಅರ್ಜಿಯಲ್ಲಿ ಕೇಳಿದ ಮಾಗಣೆಯ ಪ್ರಕಾರ ಯೂನಿಯನ್ ಬ್ಯಾಂಕಿನ ವ್ಯವಸ್ಥಾಪಕರು ನ್ಯಾಯಾಲಯಕ್ಕೆ ಬಂದು ದಾಖಲೆಗಳನ್ನು ಗುರುತಿಸಲು ಬರಲಾರದು, ಅದಕ್ಕೆ ಕಾಯ್ದೆಯಡಿಯಲ್ಲಿ ಆಸ್ಪದ ಇರುವುದಿಲ್ಲ. ಸದರಿ ದಾಖಲೆಗಳನ್ನು ಗುರುತಿಸುವ ಅಧಿಕಾರ ಅವರಿಗೆ ಇರುವುದಿಲ್ಲ. ಅಲ್ಲದೇ, ಈಗಾಗಲೇ, ಪಿರ್ಯಾದಿದಾರನನ್ನು ಭಾಗಶಃ ಪಾಟೀ ಸವಾಲು ಮಾಡಿರುವುದರಿಂದ, ಈ ಹಂತದಲ್ಲಿ ಈ ಅರ್ಜಿಯು ಕಾನೂನು ಪ್ರಕಾರ

ಊರ್ಜಿತವಾಗಿರುವುದಿಲ್ಲ. ಆದ್ದರಿಂದ, ಈ ಅರ್ಜಿಯನ್ನು ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

9. ಪಿರ್ಯಾದಿದಾರನು ತನ್ನ ಪಿರ್ಯಾದಿಯಲ್ಲಿ, ಆರೋಪಿಯು ತನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಸಹ, ಚೆಕ್ಕನ್ನು ಕೊಟ್ಟು ಲಿಖಿತಗಳ ವರ್ಗಾವಣೆ ಅಧಿನಿಯಮದ ಕಲಂ 138ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾನೆಂದು ಆರೋಪಿಸಿರುವುದರಿಂದ, ಹಾಗೂ ಆರೋಪಿಯು ದಂಡ ಪ್ರಕ್ರಿಯೆ ಸಂಹಿತೆ ಕಲಂ 91ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯು ಪುರಸ್ಕೃತಗೊಂಡಿದ್ದು, ಸದರಿ ಅರ್ಜಿಯ ಮೇಲಿನ ಆದೇಶದಂತೆ, ಹಿರೇಕೆರೂರು ಶಾಖೆಯ ಯೂನಿಯನ್ ಬ್ಯಾಂಕಿನ್ ವ್ಯವಸ್ಥಾಪಕರು ದಿ: 28-02-2023 ರಂದು ದಾಖಲೆಗಳನ್ನು ಹಾಜರುಪಡಿಸಿರುವುದರಿಂದ, ಸದರಿ ದಾಖಲೆಗಳನ್ನು ನಿಶಾನೆಯೆಂದು ಗುರುತಿಸುವ ಸಲುವಾಗಿ, ಸದರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಸಾಕ್ಷಿ ಸಮನ್ಸ ನೀಡುವುದು ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದ ಅವಶ್ಯವಾಗಿರುತ್ತದೆ. ಅಲ್ಲದೇ, ಸದರಿ ದಾಖಲೆಗಳನ್ನು ನಿಶಾನೆಯೆಂದು ಗುರುತಿಸುವುದರಿಂದ ಪಿರ್ಯಾದಿದಾರನಿಗೆ ಯಾವುದೇ ರೀತಿ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ. ಅಲ್ಲದೇ, ಸದರಿ ದಾಖಲೆಗಳ ಮೇಲೆ ಪಾಟೀ ಸವಾಲನ್ನು ಮಾಡುವಂತಹ ಎಲ್ಲ ಅಧಿಕಾರ ಪಿರ್ಯಾದಿದಾರನಿಗೆ ಇರುತ್ತದೆ. ಕಾರಣ, ಈ ಅರ್ಜಿಯಲ್ಲಿ ಕೋರಿದಂತೆ, ದಿ: 28-02-2023ರಂದು ಹಾಜರುಪಡಿಸಿದಂತಹ ದಾಖಲೆಗಳನ್ನು ನಿಶಾನೆಯೆಂದು ಗುರುತಿಸುವ ಸಲುವಾಗಿ ಸಾಕ್ಷಿ ಸಮನ್ಸ ನೀಡುವುದು ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದ ಅವಶ್ಯವಾಗಿದ್ದು, ಆದರೆ, ಈಗ ಪಿ.ಡಬ್ಲೂ-1ರವರ ಮುಂದುವರೆದ ಪಾಟೀ ಸವಾಲಿಗೆಂದು ಪ್ರಕ್ರಿಯೇ ಇರುವ ಕಾರಣ, ಈ ಹಂತದಲ್ಲಿ ಸದರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಸಾಕ್ಷಿ ನುಡಿಯಲು ಸಮನ್ಸನ್ನು ಕಳುಹಿಸುವ ಅವಶ್ಯಕತೆ ಇರುವುದಿಲ್ಲ. ಆದರೆ, ಪಿರ್ಯಾದಿದಾರನ ಪರ ಸಂಪೂರ್ಣ ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ನಂತರ, ದಂಡ ಪ್ರಕ್ರಿಯೇ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಂಡ

ನಂತರ, ಆರೋಪಿಯ ಪರವಾಗಿ ಸದರಿ ಬ್ಯಾಂಕಿನ ವ್ಯವಸ್ಥಾಪಕರು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನುಡಿಯಲು ಸಮನ್ಸನ್ನು ಕಳುಹಿಸುವುದು ಅವಶ್ಯವಾಗಿರುತ್ತದೆಂದು ತೀರ್ಮಾನಿಸಿ ಅಂಶ-1ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

10. **ಅಂಶ-2** :– ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದಃ

## ಆದೇಶ

ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 311ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು 100/- ರೂ. ಗಳ ಖರ್ಚಿನ ಮೇಲೆ ಪುರಸ್ಕರಿಸಲಾಗಿದೆ.

ಪಿರ್ಯಾದಿದಾರನ ಪರ ಸಂಪೂರ್ಣ ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ನಂತರ, ದಂಡ ಪ್ರಕ್ರಿಯೇ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಂಡ ನಂತರ, ಆರೋಪಿಯ ಪರವಾಗಿ ಹಿರೇಕೆರೂರ ಶಾಖೆಯ ಯೂನಿಯನ್ ಬ್ಯಾಂಕಿನ ವ್ಯವಸ್ಥಾಪಕರಿಗೆ, ದಿ: 28-02-2023 ರಂದು ಹಾಜರುಪಡಿಸಿದ ದಾಖಲೆಗಳ ಮೇಲೆ ಸಾಕ್ಷಿ ನುಡಿಯಲು ಸಮನ್ಸನ್ನು ಕಳುಹಿಸತಕ್ಕದ್ದು.

**(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 06ನೇ ಜನವರಿ 2024 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

ಸಹಿ/-
**(ವೈ. ಕೆ. ಬೇನಾಳ),**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಹಿರೇಕೆರೂರ